## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಸ್ಪೇಷಲ್ ಕೇಸ್ :429/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಅರುಳ್ ಶೆಲ್ವಿ | ಪ್ರಮಾಣ ಮಾಡಿದ ದಿನಾಂಕ |
| ಗಂಡನ ಹೆಸರು | : | ಆ್ಯಂಬ್ರೋಜ್ | **26.02.2024** |
| ವಯಸ್ಸು | : | 43 ವರ್ಷ | |
| ವೃತ್ತಿ | : | ಹಿರಿಯ ವೈಜ್ಞಾನಿಕ ಅಧಿಕಾರಿ , ಆರ್.ಎಫ್.ಎಸ್.ಎಲ್ , ಮೈಸೂರು | ಪಿ.ಡಬ್ಲೂಃ 1 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂಃ 6 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2014 ರಿಂದ ವೈಜ್ಞಾನಿಕ ಅಧಿಕಾರಿಯಾಗಿ 2019 ರಿಂದ ಹಿರಿಯ ವೆಜ್ಞಾನಿಕ ಅಧಿಕಾರಿಯಾಗಿ ಆರ್.ಎಫ್.ಎಸ್.ಎಲ್ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಎಮ್ ಎಸ್ಸಿ ರಾಸಾಯನಿಕ ಶಾಸ್ತ್ರ , ಬಯೋ ಟೆಕ್ನಾಲಾಜಿ ಪಿ ಹೆಚ್ ಡಿ ಮಾಡಿದ್ದೇನೆ. ವಿಷ ವಿಜ್ಞಾನದಲ್ಲಿ ತಜ್ಞೆಯಾಗಿದ್ದೇನೆ.

2. ದಿಃ 19.04.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಸೀಲಾದ ವಸ್ತುವನ್ನು ಬೆಂಗಳೂರಿನ ವಿಧಿ ವಿಜ್ಞಾನ ಕಚೇರಿಯಿಂದ ಮೈಸೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದರು. ನಮ್ಮ ಸ್ವಾಗತ ವಿಭಾಗದಲ್ಲಿ ದಿಃ27.04.2021 ಪಡೆದುಕೊಂಡು ಅದನ್ನು ನೊಂದಾಯಿಸಿಕೊಂಡರು . ಕಳುಹಿಸಿಕೊಟ್ಟಂತಹ ವಸ್ತುವಿನ ಮೇಲೆ ಸೀಲಾದ ಬಟ್ಟೆಯ ಪೊಟ್ಟಣ ಅದರಲ್ಲಿ 25 ಗ್ರಾಂ ಗಾಂಜಾ ಇದೆ ಎಂದು ನಮೂದಿಸಲಾಗಿತ್ತು. ನಮ್ಮ ಕಚೇರಿಯ ಸಹಾಯಕ ನಿರ್ದೇಶಕರು ಈ ಪ್ರಕರಣದ ವಸ್ತುವನ್ನು ಪರೀಕ್ಷೆಗಾಗಿ ನನಗೆ ಹಸ್ತಾಂತರಿಸಿದ್ದರು. ನಾನು ವಸ್ತುವನ್ನು ಪಡೆದುಕೊಂಡಾಗ ಅದರ ಮೇಲಿನ ಮುದ್ರೆ ಹಾಗೂ

ಮಾದರಿ ಮುದ್ರೆ ಹೊಲಿಕೆಯಾಗುತ್ತಿದ್ದು ಸುಸ್ಥಿತಿಯಲ್ಲಿದ್ದವು. ಪೊಟ್ಟಣ ತೆಗೆದು ನೋಡಿದಾಗ ಅದರಲ್ಲಿ ಒಣಗಿದ ಹೂವುಗಳು, ಕಾಯಿಗಳು , ಎಲೆಗಳು, ಬೀಜಗಳು ಇದ್ದವು. ನಾನು ಸದರಿ ವಸ್ತುಗಳನ್ನು ವಿಶ್ಲೇಷನೆಗೆ ಒಳಪಡಿಸಿ 3 ವಿವಿದ ಪರೀಕ್ಷೆಗಳಿಗೆ ಅವುಗಳನ್ನು ಒಳಪಡಿಸಿದಾಗ , ಗಾಂಜಾ ಅಂಶ ಇದ್ದದ್ದು ಕಂಡು ಬಂತು. ಆ ವಿವರವಾದ ಬಗ್ಗೆ ನನ್ನ ವರದಿಯನ್ನು ತಯಾರಿಸಿ ನಮ್ಮ ಪ್ರಯೋಗಾಲಯ ಉಪ ನಿರ್ದೇಶಕರ ಮೂಲಕ ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿದ್ದೇನೆ. ಪರೀಕ್ಷೆಯ ನಂತರ ಸದರಿ ಬಾಂಗಿಗಳನ್ನು ಪುನಃ ನಮ್ಮ ಇಲಾಖೆಯ ಸೀಲ್ ಮಾಡಿ ವರದಿಯೊಂದಿಗೆ ಕಳುಹಿಸಿಕೊಟ್ಟಿರುತ್ತೇವೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಕೊಟ್ಟಂತಹ ವರದಿಯಾಗಿದ್ದು ಅದಕ್ಕೆ ನನ್ನ ಸಹಿ ಇದೆ. ವರದಿಯನ್ನು ನಿಪಿ.- 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.- 8 (ಎ) ಎಂದು , ಮಾದರಿ ಸೀಲ್ ನ್ನು ನಿಪಿ. 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ 9 (ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಸೀಲ್ ಕವರ್ ನ ಮೇಲಿರುವ ಸೀಲ್ ಆರ್.ಎಫ್.ಎಸ್.ಎಲ್ ನಿಂದ ಹಾಕಿದ ಸೀಲ್ ಆಗಿದ್ದು , ಅದರ ಒಳಗಡೆ ಸ್ಟಿಕರ್ ಹಚ್ಚಲಾಗಿದೆ. ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿ ಎಮ್ ಕೆ ವಕೀಲರಿಂದ ರವರಿಂದಃ**

3. ನಿಪಿ. 8 ರಲ್ಲಿ ಸೀಲ್ ನ ಸಂಪೂರ್ಣ ವಿವರನ್ನು ನಮೂದಿಸಿಲ್ಲ ಎಂದರೆ ನಿಜ. ಸ್ವಾಗತ ವಿಭಾಗದವರು ವಸ್ತುವನ್ನು ಸ್ವೀಕರಿಸಿದಾಗ ಅವರು ಮಾದರಿ ಸೀಲ್ ಹಾಗೂ ವಸ್ತುವಿನ ಮೇಲಿರುವ ಸೀಲ್ ಹೊಲಿಕೆಯಾಗುವ ಹಾಗೂ ಯಾತಾಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸುತ್ತಾರೆ ಎಂದರೆ ನಿಜ. ಆ ಸ್ವಾಗತಗಾರರ ವರದಿಯನ್ನು ನನ್ನ ವರದಿಯೊಂದಿಗೆ

ಲಗತ್ತಿಸಿಲ್ಲ. ತನಿಖಾಧಿಕಾರಿ ವಸ್ತುವನ್ನು ಹೂವು, ಬೀಜ , ಎಲೆ ಕಾಂಡವನ್ನು ಕೂಡಿಯೇ ಕಳುಹಿಸಿದ್ದರು ಪ್ರತ್ಯೇಕವಾಗಿ ಕಳುಹಿಸಿರಲಿಲ್ಲ. ನಾನು ಅವುಗಳನ್ನು ಪ್ರತ್ಯೇಕಿಸಲಿಲ್ಲ , ಎಲ್ಲವನ್ನು ಒಟ್ಟಾಗಿಯೇ ಪರೀಕ್ಷಿಸಿದೆ. ಪರೀಕ್ಷೆಯ ಸಮಯದಲ್ಲಿ ನನ್ನ ಸಹಾಯಕರ ಸಹಾಯವನ್ನು ವಿವಿದ ಹಂತದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಲರ್ ಟೆಸ್ಟ್ ನಲ್ಲಿ ಅದು ವೈಲೆಟ್ ಕಲರ್ ಎಂದು ನಮೂದಿಸಿದ್ದೇನೆ ಅದು ಪರ್ಪಲ್ ಕಲರ್ ಆಗಬೇಕಾಗಿತ್ತು ಎಂದರೆ , ಬಣ್ಣದ ಬದಲಾವಣೆ ಗಾಂಜಾದ ಪ್ರಮಾಣವನ್ನು ಆಧರಿಸಿ ಬದಲಾಗುತ್ತದೆ. 1 ನೇ ಬಣ್ಣದ ಪರೀಕ್ಷೆಯಲ್ಲಿ ಅದು ಪರ್ಪಲ್ ಬಣ್ಣ ಬಂದರೇ ಮಾತ್ರ ಗಾಂಜಾ ಆಗುತ್ತದೆ ಎಂದರೆ ಸರಿಯಲ್ಲ.

4. ನನ್ನ ವರದಿಯಲ್ಲಿ ಗಾಂಜಾದ ಪ್ರತಿಶತ ಪ್ರಮಾಣವನ್ನು ನಮೂದಿಸಿಲ್ಲ ಎಂದರೆ ಕೇವಲ ಗಾಂಜಾ ಇತ್ತೋ ಇಲ್ಲವೋ ಎಂದು ಮಾತ್ರ ಪರೀಕ್ಷಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಪೊಲೀಸರ ವಿನಂತಿಯ ಮೆರೆಗೆ ನಾನು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆಯ ಮೆರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

26.02.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.